**ಪಾಠ–6** **ಮೇ 5–11**

# ಆಜ್ಞೆಯ ಬದಲಾವಣೆ

**ಸಬ್ಬತ್ತಿನ ಮಧ್ಯಾಹ್ನ :**

**ಈ ವಾರದ ಅಧ್ಯಯನಕ್ಕಾಗಿ :** ರೋಮ 8:1; 7:15–25; ರೋಮ 7:1–14; ಯೋಹಾನ 20:19–23: ಅ ಪೋ ಕೃ 20:6,7; ದಾನಿಯೇಲ 7:23–25; ಪ್ರಕಟನೆ 13:1–17.

*ಸ್ಮರಣ ವಾಕ್ಯ :* **"ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು ಪರಾತ್ಪರನ ಭಕ್ತರನ್ನು ಸವೆಯಿಸಿ ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನೂ ಮಾರ್ಪಡಿಸಲು ಮನಸ್ಸು ಮಾಡುವನು; ಆ ಭಕ್ತರು ಒಂದು ಕಾಲ ಎರಡು ಕಾಲ ಮತ್ತು ಅರ್ಧಕಾಲ ಅವನ ಕೈವಶವಾಗಿರುವರು"**. (ದಾನಿಯೇಲ 7:25).

ಕೊನೆಯ ಕಾಲದ ಘಟನೆಗಳ ಕುರಿತಾದ ನಮ್ಮ ಅಧ್ಯಯನದ ಕೇಂದ್ರ ಬಿಂದು ದೇವರ ಆಜ್ಞೆಯಾಗಿದೆ. ಅದರಲ್ಲೂ ವಿಶೇಷವಾಗಿ ನಾಲ್ಕನೇಯ ಆಜ್ಞೆಯಾದ ಏಳನೇಯ ದಿನದ ಸಬ್ಬತ್ತಿನ ಆಜ್ಞೆಯಾಗಿದೆ. ಆಜ್ಞೆಗಳಿಗೆ ನಾವು ತೋರಿಸುವ ವಿಧೇಯತೆಯು (ಅದರಲ್ಲಿ ನಾಲ್ಕನೇಯ ಆಜ್ಞೆಯು ಕೂಡ ಸೇರಿದೆ) ನಮಗೆ ರಕ್ಷಣೆಯನ್ನು ಕೊಡುವುದಿಲ್ಲ ಆದರೆ ದೇವರ ಮೇಲಿನ ನಂಬಿಕೆಯಿಂದ ಮಾತ್ರ ನಮಗೆ ರಕ್ಷಣೆ ಸಿಗುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಂಡರೂ ಕೂಡ ಕೊನೆಯ ದಿನಗಳಲ್ಲಿ ಆಜ್ಞೆಗಳಿಗೆ (ನಾಲ್ಕನೇಯ ಆಜ್ಞೆಯಾದ ಸಬ್ಬತ್ತಿನ ಆಜ್ಞೆಯನ್ನು ಸೇರಿಕೊಂಡು) ನಾವು ತೋರಿಸುವ ವಿಧೇಯತೆ ಬಹಿರಂಗವಾಗಿ ದೇವರನ್ನು ನಾವು ಅಂಗಿಕರಿಸುವ ಒಂದು ಸೂಚನೆಯಾಗಿದೆ. ಪ್ರಕಟನೆ 13 ಮತ್ತು 14 ನೇಯ ಅಧ್ಯಾಯಗಳಲ್ಲಿ ಹೇಳಿದ ರೀತಿಯಲ್ಲಿ ಲೋಕದಲ್ಲಿರುವ ರಾಜಕೀಯ ಮತ್ತು ಧಾರ್ಮಿಕ ಶಕ್ತಿಗಳು ಸೇರಿಕೊಂಡು ದೇವರ ಆಜ್ಞೆಯನ್ನು ಮತ್ತು ವಿಧಿಗಳನ್ನು ಬದಲಾಯಿಸಿ ಸುಳ್ಳು ಆರಾಧನೆಯನ್ನು ದೇವರ ಜನರ ಮೇಲೆ ಬಲವಂತವಾಗಿ ಹೇರುವ ಸಮಯದಲ್ಲಿ ಈ ಸೂಚನೆಯೂ ಬಹಳ ವಿಶೇಷವಾದ ಪಾತ್ರವನ್ನು ವಹಿಸುತ್ತದೆ.

ಇದೆಲ್ಲವೂ ಕೂಡ ಪ್ರಕಟಣೆ 14:7 ದೇವರ ಜನರು ಭೂಮಿಯನ್ನು ಮತ್ತು ಆಕಾಶವನ್ನು ಸೃಷ್ಟಿಸಿದ ದೇವರನ್ನು ಮಾತ್ರ ಆರಾಧಿಸಬೇಕುಎಂಬ ಹೇಳಿಕೆಗೆ ವಿರುದ್ಧವಾಗಿದೆ. ಸೃಷ್ಟಿಕರ್ತನನ್ನು ಹೊರೆತು ಬೇರೆ ಯಾರನ್ನು ನಾವು ಆರಾಧಿಸಬಾರದು.

ಈ ವಾರ ನಾವು ದೇವರ ಆಜ್ಞೆಯನ್ನು ವಿಶೇಷವಾಗಿ ನೋಡೋಣ, ಅದರಲ್ಲೂ ಸಬ್ಬತ್ತಿನ ಆಜ್ಞೆಯನ್ನು ಮತ್ತು ಈ ಆಜ್ಞೆಯನ್ನು ಬದಲಾಯಿಸಲು ಮಾಡಿದ ಪ್ರಯತ್ನಗಳನ್ನು ಗಮನಿಸೋಣ ಮತ್ತು ಈ ಕಾರ್ಯಗಳು ಲೋಕದ ಕೊನೆಯ ಕಾಲದಲ್ಲಿ ಜೀವಿಸುವ ನಮ್ಮ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಗಮನಿಸೋಣ.

**ಈ ವಾರದ ಪಾಠವನ್ನು ಮೇ 12 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ವಾಗ್ದಾನ

ಸತ್ಯವೇದದ ಅತೀ ಶ್ರೇಷ್ಠವಾದ ವಾಗ್ದಾನವನ್ನು ನಾವು ರೋಮ 8:1 ರಲ್ಲಿ ನೋಡುತ್ತೇವೆ. ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ಯಾಕೆಂದರೆ ಜಿವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು. ಈ ಮಾತುಗಳು ಒಂದು ರೀತಿಯಲ್ಲಿ ಈ ಹಿಂದೆ ನಾವು ಅಧ್ಯಯನ ಮಾಡಿದ ವಿಷಯದ ಮುಂದುವರೆದ ಭಾಗದ ಹಾಗೆ ಕಾಣಿಸುತ್ತದೆ. ಈ ವಾಗ್ದಾನದಲ್ಲಿರುವ ಮಹತ್ವವನ್ನು ನಾವು ಅರಿಯಬೇಕಾದರೆ ಈ ಹಿಂದಿನ ವಚನಗಳಲ್ಲಿ ಪೌಲನು ಎನು ಹೇಳುತ್ತಿದ್ದಾನೆ ಎಂಬುದನ್ನು ಗಮನಿಸಬೇಕು.

**ರೋಮ 7:15–25 ನ್ನು ಓದಿರಿ. ಪೌಲನು ಇಲ್ಲಿ ಹೇಳುತ್ತಿರುವ ಯಾವ ಮಾತುಗಳು ನಮ್ಮನ್ನು ರೋಮ 8:1 ರಲ್ಲಿ ಹೇಳಿರುವ ಮಾತುಗಳನ್ನು**

**ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ?**

---

---

ಇಲ್ಲಿ ಪೌಲನು ಹೇಳುತ್ತಿರುವ ವಿಷಯವು ವಿಶ್ವಾಸಿಯಾಗಿ ತನ್ನ ಅನುಭವವನ್ನು ಹೇಳುತ್ತಿದ್ದಾನೆ ಎಂಬುದರ ಕುರಿತಾಗಿ ಕ್ರೈಸ್ತವ ಲೋಕದಲ್ಲಿ ಅನೇಕ ಚರ್ಚೆಗಳು ನಡೆದಿವೆ. ಆದರೆ ಒಂದು ವಿಷಯ ಬಹಳ ಸ್ಪಷ್ಟವಾಗುತ್ತದೆ; ಪೌಲನು ಇಲ್ಲಿ ಪಾಪದ ವಾಸ್ತವತೆಯನ್ನು ವಿವರಿಸುತ್ತಾನೆ. ಪ್ರತಿಯೊಬ್ಬರೂ ಕ್ರೈಸ್ತರು ಕೂಡ ಪೌಲನು ಇಲ್ಲಿ ಹೇಳುತ್ತಿರುವ ಹೋರಾಟದ ಜೊತೆಗೆ ಗುರುತಿಸಿಕೊಳ್ಳಬಹುದು. ನಮ್ಮಲ್ಲಿ ಅಡಗಿರುವ ಪಾಪದ ಸೆಳೆತ ಮತ್ತು ಎಳೆತಗಳಿಗೆ ಯಾರು ತಾನೇ ಒಳಗಾಗಿಲ್ಲ ಮತ್ತು ಹೋರಾಟ ಮಾಡಿಲ್ಲ. ಈ ಪಾಪವು ಅವರು ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಬಿಡದೆ ಯಾವುದನ್ನು ಮಾಡಬಾರದೋ ಅದನ್ನು ಮಾಡುವಂತೆ ಪ್ರೇರಣೆ ನೀಡುವುದಿಲ್ಲವೋ? ಪೌಲನಿಗೆ ಇಲ್ಲಿ ಆಜ್ಞೆಯು ಒಂದು ಸಮಸ್ಯೆಯಲ್ಲ: ಬದಲಿಗೆ ಶರೀರವು ಒಂದು ಸಮಸ್ಯೆಯಾಗಿ ಪರಿಣಮಿಸಿದೆ.

ನಮ್ಮಲ್ಲಿ ಯಾರು ಸರಿಯಾದದ್ದನ್ನು ಮಾಡಲಾರದೆ, ಯಾವುದು ಸರಿಯಿಲ್ಲವೋ ಅದನ್ನು ಮಾಡಲು ಹೋರಾಟ ಮಾಡುತ್ತಿಲ್ಲ?ಹೊಸದಾಗಿ ಹುಟ್ಟಿದ ಅನುಭವವನ್ನು ಹೊಂದಿದ ಕ್ರೈಸ್ತನ ಅನುಭವವನ್ನು ಹೊರೆತು ಪಡಿಸಿ ಪೌಲನು ಇಲ್ಲಿ ಮಾತನಾಡುತ್ತಿದ್ದಾನೆ ಎಂದು ನಾವು ಊಹಿಸದರೂ ಕೂಡ, ದೇವರಿಗೆ ಪರಿಪೂರ್ಣವಾದ ವಿಧೇಯತೆಯನ್ನು ತೋರಿಸುವವರಿಗೆ ಉಂಟಾಗುವ ಒಂದು ನಿರಂತರ ಹೋರಾಟದ ಕುರಿತಾಗಿ ಪೌಲನು ಇಲ್ಲಿ ಒಂದು ಬಲವಾದ ವಾದವನ್ನು ಮಂಡಿಸುತ್ತಾನೆ.

ಈಗ ಆತನು ಈ ಪ್ರಸಿದ್ದ ಮಾತುಗಳ ಕಡೆಗೆ ಬರುತ್ತಾನೆ,ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು? (ರೋಮ 7:24). ಅವನ

ಉತ್ತರವೂ ಯೇಸುವಿನಲ್ಲಿ ದೊರಯಿತು, ಮತ್ತು ಯಾವ ಅಪರಾಧ ನಿರ್ಣಯವು ಇಲ್ಲಎಂಬ ಮಾತಿನಲ್ಲಿ ಯಾಕೆಂದರೆ. ವಿಶ್ವಾಸಿಯು ಯೇಸುವಿನಲ್ಲಿ ಕೃಪೆಯಿಂದ, ಆತ್ಮದಲ್ಲಿ ನಡೆಯುತ್ತಾನೆ. ಹೌದು, ವಿಶ್ವಾಸಿಗಳು ಹೋರಾಟ ಮಾಡುತ್ತಾರೆ; ಹೌದು, ಅವರು ಶೋಧನೆಗಳನ್ನು ಎದುರಿಸುತ್ತಾರೆ, ಹೌದು ಪಾಪವು ಒಂದು ವಾಸ್ತವತೆ, ಅದು ನಿಜ, ಆದರೆ, ಯೇಸುವಿನಲ್ಲಿ ವಿಶ್ವಾಸವಿಟ್ಟಿರುವವರಿಗೆಆಜ್ಞೆಯ ಮೂಲಕ ಬರುವ ಯಾವ ಅಪರಾಧ ನಿರ್ಣಯವಿಲ್ಲ. ಅವರು ಅದನ್ನು ಕೈಕೊಂಡು ನಡೆಯುತ್ತಾರೆ. ಇದರಿಂದ, ಅವರ ಶರೀರಾನುಸಾರವಾಗಿ ನಡೆಯದೆ ಆತ್ಮಾನುಸಾರವಾಗಿ ನಡೆಯುತ್ತಾರೆ.

**ಈ ದಿನದ ವಚನವನ್ನು ಮತ್ತೆ ಓದಿರಿ. ಪೌಲನು ಇಲ್ಲಿ ಹೇಳುತ್ತಿರುವ ವಿಚಾರದ ಜೊತೆಗೆ ನಮ್ಮನ್ನು ನಾವು ಹೇಗೆ ಗುರುತಿಸಿಕೊಳ್ಳುವುದು? ರೋಮ 8:1 ಯಾಕೆ ಒಂದು ಅದ್ಭುತವಾದ ವಾಗ್ದಾನವಾಗಿದೆ?**

**ಸೋಮವಾರ**

## ಆಜ್ಞೆ ಮತ್ತು ಪಾಪ

ನಿನ್ನೆಯ ದಿನದ ಅಧ್ಯಯನದಲ್ಲಿ ನಾವು ರೋಮ 7:15–25 ವಚನಗಳನ್ನು ನೋಡಿದೆವು, ಈ ವಚನಗಳು ಕ್ರೈಸ್ತರನ್ನು ಸೇರಿಕೊಂಡು ಎಲ್ಲರಲ್ಲೂ ಇರುವ ಪಾಪದ ವಾಸ್ತವಿಕತೆಯ ಕುರಿತಾಗಿ ಹೇಳುತ್ತವೆ. ಆದರೆ ಈ ವಚನಗಳ ಹಿಂದಿನ ವಚನಗಳನ್ನು ನೋಡಿದರೇ, ಪೌಲನು ಆಜ್ಞೆಯ ಕಡೆಗೆ ತೋರಿಸುತ್ತಾನೆ, ಇದು ಪಾಪವು ಎಷ್ಟು ಹರಡಿದೆ ಮತ್ತು ಅದು ಎಷ್ಟು ಅಪಾಯಕಾರಿ ಎಂದು ತೋರಿಸುತ್ತದೆ.

ಪೌಲನು ಇಲ್ಲಿ ಹೇಳುವ ವಿಷಯದಿಂದ ಎರಡು ಮುಖ್ಯವಾದ ಅಂಶಗಳು ಹೊರಬರುತ್ತವೆ. ಮೊದಲನೇಯದು, ಆಜ್ಞೆಯು ಇಲ್ಲಿ ಸಮಸ್ಯೆಯಲ್ಲ. ಆಜ್ಞೆಯು

ಪರಿಶುದ್ದವಾದದ್ದು ಮತ್ತು ಪರಿಪೂರ್ಣವಾದದ್ದು ಆದರೆ ಸಮಸ್ಯೆ ಇರುವುದು ಪಾಪದಲ್ಲಿ, ಅದು ಮರಣದ ಕಡೆಗೆ ನಡೆಸುತ್ತದೆ. ಆಜ್ಞೆಗೆ ನಮ್ಮನ್ನು ಪಾಪದಿಂದ ಮತ್ತು ಮರಣದಿಂದ ಬಿಡಿಸಲು ಶಕ್ತಿಯಿಲ್ಲ ಎಂಬುದು ಮತ್ತೊಂದು ಅಂಶ: ಇನ್ನೊಂದು ಅಂಶವೆಂದರೆ ಆಜ್ಞೆಯು ಪಾಪವನ್ನು ಮತ್ತು ಮರಣವನ್ನು ಇನ್ನೂ ಹೆಚ್ಚಾಗಿ ತೋರಿಸುತ್ತದೆ ಆದರೆ ಅದಕ್ಕೆ ಬೇಕಾದ ಪರಿಹಾರವನ್ನು ಅದು ನೀಡುವುದಿಲ್ಲ.

ಈ ವಚನವನ್ನು ನಾವು ಮೇಲ್ನೋಟಕ್ಕೆ ಓದಿದಾಗ (ಇತರೆ ವಿಷಯಗಳನ್ನು ಬಿಟ್ಟು) ಆಜ್ಞೆ, ಹತ್ತು ಆಜ್ಞೆಗಳು, ಹೊಡೆದು ಹಾಕಲ್ಪಟ್ಟಿವೆ. ಇದು ಪೌಲನ ವಾದಕ್ಕೆ ವಿರುದ್ದವಾಗಿದೆ. ಪೌಲನು ಇನ್ನೂ ನಾವು ಆಜ್ಞೆಯ ಅಧಿನದಲ್ಲಿದ್ದೇವೆ ಎಂಬ ವಾದಕ್ಕೆ ವಿರುದ್ದವಾಗಿ ಮಾತನಾಡುತ್ತಾನೆ ಯಾಕೆಂದರೆ ಆಜ್ಞೆಯು ಪಾಪದ ತೀವ್ರತೆಯನ್ನು ತೋರಿಸುತ್ತದೆ ಮತ್ತು ಸುವಾರ್ತೆಯ ಅವಶ್ಯಕತೆಯನ್ನು ಕೂಡ ತೋರಿಸುತ್ತದೆ ಹಾಗಾದರೆ ಏನು ಹೇಳೋಣ? ಧರ್ಮಶಾಸ್ತ್ರವು ಪಾಪ ಸ್ವರೂಪವೋ? ಎಂದಿಗೂ ಅಲ್ಲ. ಧರ್ಮಶಾಸ್ತ್ರದಿಂದಲೇ ಹೊರೆತು ಪಾಪವೆಂಬುದು ಏನೋ ನನಗೆ ಗೊತ್ತಾಗುತ್ತಿರಲಿಲ್ಲ. ದುಷ್ಟಾಂತವಾಗಿ, ಆಶಿಸಬಾರದೆಂದು ಧರ್ಮಶಾಸ್ತ್ರವು ಹೇಳದಿದ್ದರೆ ದುರಾಶೆಯೆಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ. (ರೋಮ 7:7)

**ರೋಮ 7:13 ನ್ನು ಜಾಗ್ರತೆಯಿಂದ ಓದಿರಿ. ಇಲ್ಲಿ ಪೌಲನು ಆಜ್ಞೆಯ ಮತ್ತು ಅದರ ಅವಶ್ಯಕತೆ ಇನ್ನೂ ಇದೆ ಎನ್ನುವುದರ ಕುರಿತಾಗಿ ಏನು ಹೇಳುತ್ತಿದ್ದಾನೆ?**

ಆಜ್ಞೆಯು ಮರಣವನ್ನು ತರುವುದಿಲ್ಲ; ಪಾಪವು ತರುತ್ತದೆ. ಪಾಪವು ಎಷ್ಟು ಭಯಂಕರ ಎಂಬುದನ್ನು ಆಜ್ಞೆಯು ತೋರಿಸುತ್ತದೆ. ಆಜ್ಞೆಯು ಒಳ್ಳೆಯದು ಯಾಕೆಂದರೆ ಅದು ಪಾಪವನ್ನು ತೋರಿಸುತ್ತದೆ. ಆದರೆ ಪಾಪಕ್ಕೆ ಆದರ ಬಳಿಯಲ್ಲಿ ಉತ್ತರವಿಲ್ಲ. ಅದಕ್ಕೆ ಉತ್ತರವನ್ನು ಸುವಾರ್ತೆಯು ನೀಡುತ್ತದೆ. ಕಿಸ್ತನಲ್ಲಿ ರಕ್ಷಣೆಯನ್ನು ಹೊಂದಿದ ಕ್ರೈಸ್ತರು ಹೊಸ ರೀತಿಯಲ್ಲಿ ಆತನನ್ನು ಸೇವಿಸುವವರಾಗಿದ್ದೇವೆ (ರೊಮ7:6) ಎಂದು ಪೌಲನು ಹೇಳುತ್ತಾನೆ. ಅಂದರೆ, ನಾವು ಕ್ರಿಸ್ತನ ಜೊತೆಯಲ್ಲಿ

ನಂಬಿಕೆಯ ಜೀವನ ನಡೆಸುತ್ತೇವೆ, ರಕ್ಷಣೆಗಾಗಿ ನಾವು ಆತನ ಅರ್ಹತೆ ಮತ್ತು ನೀತಿಯನ್ನು ಅಧಾರ ಮಾಡಿಕೊಳ್ಳುತ್ತೇವೆ. (ಇದರ ಕುರಿತಾಗಿ ರೋಮ ಪುಸ್ತಕದ ಅಧ್ಯಯನದಲ್ಲಿ ನಾವು ನೋಡಿದ್ದೇವೆ)

**ನಿಮ್ಮ ಅನುಭವದಲ್ಲಿ ದೇವರ ಆಜ್ಞೆಗೆ ನೀವು ತೋರಿಸುವ ವಿಧೇಯತೆಯು, ನಿಮಗೆ ದೇವರ ಕೃಪೆಯು ಬೇಕಾಗಿದೆ ಎಂಬುದರ ಕುರಿತಾಗಿ ಏನು ಹೇಳುತ್ತದೆ?**

**ಮಂಗಳವಾರ**

## ಸಬ್ಬತ್ತಿನಿಂದ ಭಾನುವಾರದ ಕಡೆಗೆ

ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಮ್ಮ ಇತರೆ ಕ್ರೈಸ್ತ ಸಹೋದರರು ಹಲವು ಬಾರಿ ನಮ್ಮ ಬಳಿಯಲ್ಲಿ ದೇವರ ಆಜ್ಞೆಯನ್ನು ತೆಗೆದುಹಾಕಲಾಗಿದೆ. ಅಥವಾ ನಾವು ಆಜ್ಞೆಯ ಕೆಳಗೆ ಇಲ್ಲ ಕೃಪೆಯ ಕೆಳಗೆ ಇದ್ದೇವೆ ಎಂಬುದಾಗಿ ವಾದ ಮಾಡುವುದನ್ನು ಕೇಳಿದ್ದೇವೆ. ಅವರು ನಿಜವಾಗಿ ಏನು ಹೇಳುತ್ತಿದ್ದಾರೆ, ಅಂದರೆ, ನಾಲ್ಕನೇಯ ಆಜ್ಞೆಯನ್ನು ತೆಗೆದು ಹಾಕಲಾಗಿದೆ ಎಂಬುದಾಗಿ ವಾದಿಸುತ್ತಾರೆ. ಆದರೆ ಅನೇಕರು ಇದನ್ನೇ ಹೇಳುತ್ತಿಲ್ಲ. ಇದಕ್ಕೆ ಬದಲಾಗಿ ಏಳನೇಯ ದಿನದ ಆರಾಧನೆಗೆ ಬದಲಾಗಿ ಮೊದಲನೇಯ ದಿನದ ಆರಾಧನೆಯನ್ನು ಮಾಡಬೇಕು ಇದನ್ನೇ ಯೇಸುವಿನ ಪುನರುತ್ಥಾನದ ಗುರುತಾಗಿ ಭಾನುವಾರವನ್ನು ಪರಿಶುದ್ದ ದಿನವಾಗಿ ಬದಲಾಯಿಸಿದರು ಎಂಬುದಾಗಿ ವಾದಿಸುತ್ತಾರೆ.

ಇದನ್ನು ರುಜು ಮಾಡಲು ಅವರ ಬಳಿಯಲ್ಲಿ ಸತ್ಯವೇದದ ಆಧಾರಿತ ವಾಕ್ಯಗಳಿವೆ ಎಂಬುದಾಗಿ ಅವರು ಹೇಳುತ್ತಾರೆ.

ಈ ಕೆಳಗೆ ನೀಡಲಾಗಿರುವ ಕೆಲವು ವಚನಗಳನ್ನು ಉಪಯೋಗಿಸಿಕೊಂಡು ಹಳೆಯ ಒಡಂಬಡಿಕೆಯ ಏಳನೇಯ ದಿನದ ಸಬ್ಬತ್ತನ್ನು ಹೊಸ ಒಡಂಬಡಿಕೆಯ ಮೊದಲನೇಯ ದಿನದ ಆರಾಧನೆಗೆ ಬದಲಾಯಿಸಲಾಗಿದೆ ಎಂಬುದಾಗಿ ಆವರು ಹೇಳುತ್ತಾರೆ. ನಾವು ಈ ವಚನಗಳನ್ನು ಓದುವ ಹಾಗೆ, ನಮ್ಮನ್ನು ನಾವು

ಪ್ರಶ್ನಿಸಿಕೊಳ್ಳಬೇಕು ಈ ವಚನಗಳು ನಿಜವಾಗಲೂ ಕೂಡ ಆ ರೀತಿಯ ಭಾವವನ್ನು ನೀಡುತ್ತವೆಯೋ ಅಥವಾ ಆ ದಿನದಲ್ಲಿ ಏನು ನಡೆಯಿತು ಎಂಬುದನ್ನು ಹೇಳುತ್ತಾ ಅವರು ತೋರಿಸುವ ಯಾವುದೇ ಬದಲಾವಣೆ ಇದರಲ್ಲಿ ಕಾಣುವುದಿಲ್ಲ ಎಂದು ಪರಿಶೀಲಿಸಬೇಕು?

**ಯೋಹಾನ 20:19–23 ನ್ನು ಓದಿರಿ. ಶಿಷ್ಯರು ಆ ಕೋಣೆಯಲ್ಲಿ ಸೇರಲು ಕಾರಣವೇನು? ಕೆಲವರು ವಾದಿಸುವ ಹಾಗೆ ಈ ಆರಾಧನೆಯು ಪುನರುತ್ಥಾನದ ಗೌರವಾರ್ಥ ನಡೆಯುತ್ತಿದ್ದ ಆರಾಧನೆ ಎಂದು ಆ ವಚನ ಹೇಳುತ್ತದೆಯೋ?**

---

---

**ಅ. ಪೋ ಕೃ. 20:6,7, ನ್ನು ಓದಿರಿ. ಈ ವಚನಗಳಲ್ಲಿ ಸಬ್ಬತ್ ದಿನವನ್ನು ವಾರದ ಮೊದಲನೇಯ ದಿನ ಭಾನುವಾರಕ್ಕೆ ಬದಲಾಯಿಸಲಾಗಿದೆ ಎಂಬುದಾಗಿ ತಿಳಿಸಲಾಗಿದೆಯೋ?**

---

---

**1 ಕೊರಿಂಥ 16:1–4 ನ್ನು ಓದಿರಿ. ವಾರದ ಮೊದಲನೇಯ ದಿನದಂದು ಅವರು ಕಾಣಿಕೆಯನ್ನು ಕೂಡಿಸಿಟ್ಟ ಕಾರಣವನ್ನು ಹೊರೆತುಪಡಿಸಿ ಭಾನುವಾರದ ಆರಾಧನೆಯನ್ನು ಸಮರ್ಥಿಸುವ ವಚನಗಳು ಯಾವುವು?**

---

---

ಇಲ್ಲಿ ವಾಕ್ಯಗಳ ಆಧಾರವನ್ನು ಉಪಯೋಗಿಸಿಕೊಂಡು ಏಳನೇಯ ದಿನದ ಸಬ್ಬತ್ತನ್ನು ಮೊದಲನೇಯ ದಿನ ಭಾನುವಾರಕ್ಕೆ ಬದಲಾಯಿಸಲಾಗಿದೆ ಎಂದು

ವಾದಿಸುವವರು ಉಪಯೋಗಿಸುವ ವಿಧಾನವನ್ನು ನಾವು ನೋಡಬಹುದು. ಅನೇಕ ಕಾರಣಗಳಿಂದ ಇಲ್ಲಿ ವಿಶ್ವಾಸಿಗಳು ಕೂಡಿದ್ದರು ಕೂಡ ಅವರು ಆರಾಧನೆಗೆ ಕೂಡಿ ಬಂದು ಏಳನೇಯ ದಿನದ ಬದಲಿಗೆ ಮೊದಲನೇಯ ದಿನ ಆರಾಧಿಸಿದರು ಎಂದು ತಿಳಿಸುವುದಿಲ್ಲ. ಈ ವಾದವನ್ನು ಶತಮಾನಗಳ ಹಿಂದೆ ಸಬ್ಬತ್ತನ್ನು ಭಾನುವಾರಕ್ಕೆ ಬದಲಾಯಿಸಲಾಗಿದೆ ಎಂದು ಹೇಳುವವರು ಉಪಯೋಗಿಸಿಕೊಳ್ಳುತ್ತಾರೆ. ಇದರ ಪ್ರಕಾರ ವಚನದಲ್ಲಿ ಇಲ್ಲದೆ ಇರುವುದನ್ನು ಅದರಲ್ಲಿ ಹಾಕಿ ಓದುವುದಾಗಿದೆ.

**ಬುಧವಾರ**

## ಹೊಸ ಒಡಂಬಡಿಕೆಯಲ್ಲಿ ಏಳನೇಯ ದಿನ

ನಿನ್ನೆಯ ದಿನ ನಾವು ನೋಡಿದ ಹಾಗೆ ಆ ವಚನಗಳು ಏಳನೇಯ ದಿನದ ಸಬ್ಬತ್ತನ್ನು ವಾರದ ಮೊದಲನೇಯ ದಿನಕ್ಕೆ ಬದಲಾಯಿಸಲಾಗಿದೆ ಎಂದು ಹೇಳುವುದಿಲ್ಲ. ಮುಖ್ಯವಾಗಿ, ಹೊಸ ಒಡಂಬಡಿಕೆಯಲ್ಲಿ ಏಳನೇಯ ದಿನದ ಉಲ್ಲೇಖವನ್ನು ಎಲ್ಲಿ ಪ್ರಸ್ತಾವನೆ ಮಾಡಿದ್ದರೂ ಕೂಡ ಅದು ದೇವರ ಆಜ್ಞೆಗಳನ್ನು ಕಾಪಾಡುವ ಹಿನ್ನಲೆಯಲ್ಲಿ ಮಾತ್ರ ಹೇಳಲಾಗಿದೆ.

**ಲೂಕ 4:14–16; 23:55,56.ನ್ನು ಓದಿರಿ. ಯೇಸುವಿನ ಮರಣಕ್ಕೆ ಮುನ್ನ ಮತ್ತು ಆತನ ಮರಣದ ನಂತರ ಏಳನೇಯ ಸಬ್ಬತ್ತಿನ ಕುರಿತಾಗಿ ಈ ವಚನಗಳು ಎನು ಹೇಳುತ್ತವೆ?**

________________________________________

________________________________________

ಯೇಸುವಿನ ಜೊತೆಯಲ್ಲಿದ್ದ ಸ್ತ್ರೀಯರು, ಹೇಗೆ ಆಜ್ಞೆಯ ಪ್ರಕಾರ ಸಬ್ಬತ್ ದಿನದಲ್ಲಿ ವಿಶ್ರಮಿಸಿಕೊಂಡರು (ಲೂಕ 23:56) ಎಂಬುದನ್ನು ಗಮನಿಸಿರಿ. ಸೂಕ್ಷ್ಮವಾಗಿ ನೋಡಿದರೆ ಅದು ನಾಲ್ಕನೇಯ ಆಜ್ಞೆಯಾಗಿದ್ದು ಸಿನಾಯಿ ಪರ್ವತದ

ಮೇಲೆ ಕಲ್ಲಿನ ಮೇಲೆ ಬರೆದ ಆಜ್ಞೆಯಾಗಿತ್ತು. ಅವರು ಯೇಸುವಿನ ಜೊತೆಯಲ್ಲಿದ್ದ ಸಮಯದಲ್ಲಿ ಏನು ಕಲಿತರೋ ಅದನ್ನು ನೋಡಿದರೆ ದೇವರ ಆಜ್ಞೆಗಳಿಗೆ ವಿಧೇಯರಾಗುವುದು ಮತ್ತು ಏಳನೇಯ ದಿನದ ಸಬ್ಬತ್ತಿನ ಆಚರಣೆಗೆ ಬದಲಾಗಿ ಅವರು ಬೇರೆ ಯಾವುದನ್ನು ಕಲಿತಿಲ್ಲ. ಯೇಸುವು ತನ್ನ ಶಿಷ್ಯರಿಗೆ ನೀವು ನನ್ನನ್ನು ಪ್ರೀತಿಸಿದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯಿರಿ (ಯೋಹಾನ 14:15). ಆತನ ಆಜ್ಞೆಗ್ಗಳನ್ನು ಆತನೂ ಕೂಡ ಕಾಪಾಡಿದನು, ಇದರಲ್ಲಿ ಏಳನೇಯ ದಿನದ ಆಜ್ಞೆಯು ಕೂಡ ಸೇರಿದೆ. ಒಂದು ವೇಳೆ ಸಬ್ಬತ್ ದಿನವನ್ನು ಮೊದಲನೇಯ ದಿನಕ್ಕೆ ಬದಲಾಯಿಸಿದ್ದಾರೆ ಈ ಸ್ತ್ರೀಯರಿಗೆ ಅದರ ಕುರಿತಾದ ಯಾವುದೇ ಮಾಹಿತಿ ಇಲ್ಲ.

**ಅ.ಪೋ. ಕೃ. 13:14, 42–44: ಅ. ಪೋ. ಕೃ. 16:12,13 ನ್ನು ಓದಿರಿ. ಏಳನೇಯ ದಿನದ ಸಬ್ಬತ್ತನ್ನು ಆಚರಿಸಲಾಗುತ್ತಿತ್ತು ಎನ್ನುವುದಕ್ಕೆ ಯಾವ ಸಾಕ್ಷಿಯನ್ನು ಈ ವಚನಗಳು ನೀಡುತ್ತವೆ?ವಾರದ ಮೊದಲನೇಯ ದಿನವನ್ನು ಆರಾಧನೆಗೆ ನಿಯಮಿಸಲಾಗಿದೆ ಎನ್ನುವುದಕ್ಕೆ ಯಾವ ಸಾಕ್ಷಿಯನ್ನು ಈ ವಚನಗಳು ನೀಡುತ್ತವೆ?**

ಸಬ್ಬತ್ ದಿನವನ್ನು ಏಳನೇಯ ದಿನದಿಂದ ವಾರದ ಮೊದಲನೇಯ ದಿನಕ್ಕೆ ಬದಲಾಯಿಸಿರುವುದಕ್ಕೆ ಯಾವುದೇ ಸಾಕ್ಷಿಯೂ ಕೂಡ ಇಲ್ಲಿ ಸಿಗುವುದಿಲ್ಲ. ಬದಲಾಗಿ, ಯೇಸುವು ಮತ್ತು ಆತನ ಶಿಷ್ಯರು ಆ ಕಾಲದಲ್ಲಿ ಏಳನೇಯ ದಿನದ ಸಬ್ಬತ್ತನ್ನು ಆಚರಿಸಿದರು ಎಂದು ತೋರಿಸುತ್ತದೆ.

ಅ. ಪೋ. ಕೃ. 16:13 ರಲ್ಲಿ ವಿಶೇಷವಾಗಿ ನೋಡಬೇಕು, ಯಾಕೆಂದರೆ ಇಲ್ಲಿಯ ಘಟನೆ ದೇವಾಲಯದ ಹೊರಗೆ ನಡೆಯತ್ತಿದೆ. ವಿಶ್ವಾಸಿಗಳು ನದಿಯ ದಡದಲ್ಲಿ ಸೇರಿದ್ದಾರೆ ಅದರಲ್ಲಿ ಕೆಲವರು ತಮ್ಮ ಆಚರಣೆಯ ಪ್ರಕಾರ ಪ್ರಾರ್ಥಿಸಲು ಹೋದರು. ಇದನ್ನು ಅವರು ವಾರದ ಏಳನೇಯ ದಿನದ ಸಬ್ಬತ್ತಿನಲ್ಲಿ ಮಾಡಿದರು.

ಯೇಸುವಿನ ಮರಣದ ಅನೇಕ ವರ್ಷಗಳ ನಂತರ ಇದನ್ನು ಮಾಡಿದರು. ಒಂದು ವೇಳೆ ಬದಲಾವಣೆಯಾಗಿದ್ದಾರೆ ಈ ವಚನಗಳು ಅದರ ಕುರಿತಾಗಿ ಏನೂ ಕೂಡ ಹೇಳುವುದಿಲ್ಲ.

**ಏಳನೇಯ ದಿನದ ಸಬ್ಬತ್ತಿನ ವಿಚಾರದಲ್ಲಿ ಮೃದುವಾಗಿ ಮತ್ತು ಅರ್ಥವಾಗುವ ರೀತಿಯಲ್ಲಿ ನಾವು ನಮ್ಮ ಇತರ ಕ್ರೈಸ್ತರಿಗೆ ಹೇಗೆ ತಿಳಿಸಬಹುದು?**

**ಗುರುವಾರ**

## ಸಬ್ಬತ್ ದಿನವನ್ನು ಬದಲಾಯಿಸಲು ಪ್ರಯತ್ನ ಮಾಡುವುದು

ದೇವರ ಆಜ್ಞೆಯು ಇನ್ನೂ ಕೂಡ ಆಚರಣೆಯಲ್ಲಿದೆ (ಯಾಕೋಬನು 2:10–12), ಮತ್ತು ಈ ಅಜ್ಞೆಗಳಲ್ಲಿ ಏಳನೇಯ ದಿನದ ಸಬ್ಬತ್ತಿನ ಆಜ್ಞೆಯು ಕೂಡ ಸೇರಿದೆ. ಸತ್ಯವೇದದ ಅಧಾರವಿಲ್ಲದೆ ಇದ್ದರೂ ಕೂಡ ಯಾಕೆ ಕೆಲವು ಕ್ರೈಸ್ತರು ಭಾನುವಾರದ ಆರಾಧನೆಯನ್ನು ಮಾಡುತ್ತಾರೆ.?

ದಾನಿಯೇಲ 7 ರಲ್ಲಿ ನಾಲ್ಕು ಮಹಾ ಸಾಮ್ರಾಜ್ಯಗಳ ಆರಂಭದ ಕುರಿತಾಗಿ ಹೇಳಲಾಗಿದೆ. ಬಾಬೇಲ್, ಮೆದ್ಯ ಪಾರಸಿಕ, ಗ್ರೀಕ್ ಮತ್ತು ರೋಮ್ ನಾಲ್ಕನೇಯ ಹಾಗೂ ಲೋಕದ ಕೊನೆಯ ಸಾಮ್ರಾಜ್ಯ. ರೋಮ್ ಸಾಮ್ರಾಜ್ಯದ ಕೊನೆಯ ಭಾಗದಲ್ಲಿ ಸಣ್ಣ ಕೊಂಬು ದೊಡ್ಡ ಶಕ್ತಿಯಾಗಿ ಹೊರಬರುವ ಚಿತ್ರಣವಿದೆ. ಇದು ಇನ್ನೂ ಕೂಡ ರೋಮ್ ಸಾಮ್ರಾಜ್ಯದ ಭಾಗವಾಗಿದೆ. ಅದರ ಕೊನೆಯ ಹಂತ. ಇದನ್ನು ನಾವು ಧಾರ್ಮಿಕ ರೋಮ್ ಎಂದು ಹೇಳುತ್ತೇವೆ, ಇದು ರೋಮ್ ನಿಂದ ಹೊರಗೆ ಬಂದು ಈ ದಿನದ ತನಕ ರಾಜ್ಯಭಾರ ಮಾಡುತ್ತಿದೆ. ಇದು ಇಂದಿಗೂ ಅದರ ಭಾಗವಾಗಿದೆಯೋ?

1600 ರಲ್ಲಿ ಥಾಮಸ್ ಹೊಬ್ಸ್ ಈ ರೀತಿಯಾಗಿ ಬರೆಯುತ್ತಾರೆ: ಮನುಷ್ಯನು ಈ ಶಕ್ತಿಯನ್ನು ಗ್ರಹಿಸಿದರೆ ಅದು ನಿಜವಾಗಲೂ ಧಾರ್ಮಿಕ ರೋಮ್ ಎಂದು

ಅರ್ಥ ಮಾಡಿಕೊಳ್ಳುತ್ತಾರೆ. ಇದರ ಸಮಾಧಿಯ ಮೇಲೆ ರೋಮ್ ನ ಯಾವುದೇ ಪ್ರೇತಾತ್ಮಗಳು ಬಂದು ಕುಳಿತಿಲ್ಲ. **ಥಾಮಸ್ ಹೂಬ್ಸ್ ಲೆವಿಥನ್, ಪುಟ 463.**

**ದಾನಿಯೇಲ 7:23–25 ನ್ನು ಓದಿರಿ. ಭಾನುವಾರದ ಆರಾಧನೆಯ ಆರಂಭದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?**

---

---

ಆರಾಮಿಕ್ ಮೂಲ ಭಾಷೆಯಲ್ಲಿ 25 ನೇಯ ವಚನವು ಹೇಳುವ ಪ್ರಕಾರ ಸಣ್ಣ ಕೊಂಬು ಆಜ್ಞೆಯನ್ನು ಬದಲಾಯಿಸಲು ಮನಸ್ಸು ಮಾಡುತ್ತದೆ, ಭೂಲೋಕದ ಯಾವ ಶಕ್ತಿಯು ದೇವರ ಆಜ್ಞೆಯನ್ನು ಬದಲಾಯಿಸಲು ಸಾಧ್ಯ?

ಚರಿತ್ರೆಯಲ್ಲಿ ವಿವರಣೆಗಳು ಬಹಳ ಮಂಕಾಗಿದ್ದರೂ ಕೂಡ ಧಾರ್ಮಿಕ ರೋಮ್ ನ ಅಧಿಕಾರದ ಸಮಯದಲ್ಲಿ ಏಳನೇಯ ಸಬ್ಬತ್ ದಿನವನ್ನು ವಾರದ ಮೊದಲನೇಯ ದಿನಕ್ಕೆ ಬದಲಾಯಿಸಲಾಯಿತು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಕೂಡ ಆಚರಣೆಗೆ ಎಷ್ಟು ಪ್ರಾಮುಖ್ಯತೆಯನ್ನು ನೀಡಲಾಗಿದೆ ಎಂದರೆ ಆ ಸಮಯದಲ್ಲಿ ಆಚರಣೆ ಎಷ್ಟು ಮುಖ್ಯವಾಗಿರಬಹುದು. ಇಂದು ಅನೇಕ ಪ್ರೊಟೆಸ್ಟೆಂಟ್ ರು ಸತ್ಯವೇದದ ಏಳನೇಯ ದಿನದ ಸಬ್ಬತ್ ನ್ನು ಬಿಟ್ಟು ಆಚರಣೆಯ ವಾರದ ಮೊದಲನೇಯ ದಿನವನ್ನು ಆರಾಧನೆಯ ದಿನವಾಗಿ ಆಚರಣೆ ಮಾಡುತ್ತಾರೆ.

**ಪ್ರಕಟನೆ 13:1–17 ನ್ನು ಓದಿರಿ ಮತ್ತು ದಾನಿಯೇಲ 7:1–8,21, 24, 25 ರ ಜೊತೆಯಲ್ಲಿ ಅದನ್ನು ಹೋಲಿಸಿರಿ. ಕೊನೆಯ ದಿನಗಳಲ್ಲಿ ನಡೆಯುವ ಘಟನೆಗಳ ಕುರಿತಾಗಿ ಈ ವಚನಗಳು ನಮಗೆ ಯಾವ ಸಾಮ್ಯತೆಯನ್ನು ನೀಡುತ್ತವೆ?**

---

---

ದಾನಿಯೇಲ ಪುಸ್ತಕದ ಚಿತ್ರಣವನ್ನು ನೇರವಾಗಿ ಉಪಯೋಗಿಸಿಕೊಂಡು ಇದು ರೋಮ್ ನ ಮುಂದಿನ ರಾಜಕೀಯ ಶಕ್ತಿಯ ಕುರಿತಾಗಿ ಮಾತನಾಡುತ್ತದೆ. ಇದನ್ನು ಹೇಳುತ್ತಾ ಪ್ರಕಟಣೆಯ ಪುಸ್ತಕವು ಕೊನೆಯ ಕಾಲದಲ್ಲಿ ಲೋಕದ ಶಕ್ತಿಗಳು ಹೇಳುವ ಆರಾಧನೆಯನ್ನು ವಿರೋಧಿಸುವ ಜನರಿಗೆ ಉಂಟಾಗುವ ಶ್ರಮೆಯ ಕುರಿತಾಗಿ ಪ್ರಕಟಣೆಯ ಪುಸ್ತಕವು ನಮಗೆ ತಿಳಿಸುತ್ತದೆ.

**ಪ್ರಕಟನೆ 14:6,7 ಅದರಲ್ಲೂ ವಚನ 7 ರಲ್ಲಿ ನಾಲ್ಕನೇಯ ಆಜ್ಞೆಯ ಭಾಗವಾಗಿರುವ ಭಾಷೆಯನ್ನು ಉಪಯೋಗಿಸಿಕೊಂಡು (ವಿಮೋಚನೆಕಾಂಡ 2–:11) ಹೇಳಲಾಗಿರುವ ವಿಷಯವು ಕೊನೆಯ ಕಾಲದಲ್ಲಿ ಆರಾಧನೆಯು ಹೇಗೆ ಬಹಳ ಪ್ರಾಮುಖ್ಯವಾದದ್ದು ಎಂದು ತೋರಿಸುತ್ತದೆ?**

**ಶುಕ್ರವಾರ**

**ಮುಂದಿನ ಆಲೋಚನೆ :** ಅದೇ ಘಟಸರ್ಪನು, ಸೈತಾನನು, ಪರಲೋಕದಲ್ಲಿ ದೇವರ ವಿರುದ್ಧವಾಗಿ ಯುದ್ಧ  ಮಾಡಿದವನು (ಪ್ರಕಟನೆ 12:7) ಈ ಭೂಲೋಕದಲ್ಲಿ ಯಾರು ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವರೋ (ಪ್ರಕಟನೆ 12:17; 13:2,4 ನ್ನೂ ಕೂಡ ನೋಡಿರಿ) ಅಂತಹ ದೇವರ ಮಕ್ಕಳ ಜೊತೆಯಲ್ಲಿ ಯುದ್ದ ಮಾಡುವನು. ಒಂದು ವಿಧದಲ್ಲಿ ಸೈತಾನನು ತಾನೇ ಆರಾಧನೆಯ ಕೇಂದ್ರ ಬಿಂದುವಾಗುತ್ತಾನೆ (ಪ್ರಕಟಣೆ 13:4). ಆದ್ದರಿಂದ ಪರಲೋಕದಲ್ಲಿ ಸೈತಾನನು ದೇವರ ವಿರುದ್ದ ಆರಂಭಿಸಿದ ಯುದ್ಧವನ್ನು ಈ ಲೋಕದಲ್ಲಿ ಮುಂದುವರೆಸಲು ಬಯಸುತ್ತಾನೆ. ಈ ಯುದ್ಧದ  ಕೇಂದ್ರ ಬಿಂದು ದೇವರ ನಾಲ್ಕನೇಯ ಆಜ್ಞೆಯಾಗಿದೆ.

ನಾಲ್ಕನೇಯ ಆಜ್ಞೆಯಲ್ಲಿ ದೇವರು ಪರಲೋಕದ ಮತ್ತು ಭೂಲೋಕದ ಸೃಷ್ಟಿ ಕರ್ತನಾಗಿ ಮತ್ತು ಇತರೆ ಎಲ್ಲಾ ಸುಳ್ಳು ದೇವರುಗಳ ವಿರುದ್ದ ವಾಗಿ ನಿಲ್ಲುವ ದೇವರಾಗಿ ತೋರಿಸಲಾಗಿದೆ. ಅದು ಏಳು ದಿನಗಳ ಸೃಷ್ಟಿ ಕಾರ್ಯಕ್ಕೆ ಜ್ಞಾಪಕ ಚಿನ್ಹೆಯಾಗಿ ಮನುಷ್ಯನಿಗಾಗಿ ಪರಿಶುದ್ದಗೊಳಿಸಿದ ದಿನವಾಗಿದೆ. ಇದರ

ಮೂಲಕ ಮನುಷ್ಯರು ಯಾವಾಗಲೂ ಕೂಡ ಸೃಷ್ಟಿ ಕರ್ತನನ್ನು ಅವರ ಮುಂದೆ ಇಟ್ಟುಕೊಂಡು ಆರಾಧಿಸುವುದರ ಸಂಕೇತವಾಗಿ ಸಬ್ಬತ್ ದಿನವನ್ನು ನೀಡಲಾಯಿತು. ಸೈತಾನನು ಮನುಷ್ಯರನ್ನು ದೇವರ ಪ್ರಾಮಾಣಿಕತೆಯಿಂದ ದೂರ ಮಾಡಲು ಪ್ರಯತ್ನಿಸುತ್ತಾನೆ ಮತ್ತು ಆತನ ಆಜ್ಞೆಗಳಿಗೆ ಅವಿಧೇಯತೆಯನ್ನು ತೋರಿಸುವಂತೆ ಮಾಡುತ್ತಾನೆ. ಇದರಿಂದ ದೇವರನ್ನು ಸೃಷ್ಟಿ ಕರ್ತನೆಂದು ತೋರಿಸುವ ಆಜ್ಞೆಯ ಮೇಲೆ ಯುದ್ದ ಮಾಡುತ್ತಾನೆ. **ಎಲೆನ್ ಜಿ ವೈಟ್, ಮಹಾ ಹೋರಾಟ ಪುಟ 53, 54**.

ದೇವರು ಪರಲೋಕ ಮತ್ತು ಭೂಲೋಕದ ಸೃಷ್ಟಿ ಕರ್ತನಾಗಿರುವುದರಿಂದ ನಾವು ಆತನನನ್ನು ಆರಾಧಿಸುತ್ತೇವೆ ಮತ್ತು ಆತನ ಸೃಷ್ಟಿಗೆ ಸಾಕ್ಷಿಯಾಗಿ ಏಳನೇಯ ದಿನದ ಸಬ್ಬತ್ ನಿಂತಿದೆ. ಈ ಸೂಚನೆಯು ಸೃಷ್ಟಿಯ ಆರಂಭಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ (ಆದಿಕಾಂಡ 2:1–3). ಇದು ದೇವರ ಅಧಿಕಾರದ ಮೇಲೆ ಸೈತಾನನು ಮಾಡುವ ಯುದ್ದ. ಆತನ ಅಧಿಕಾರದ ಮೂಲ ಮುದ್ರೆಯಾದ ದೇವರ ಏಳನೇಯ ದಿನದ ಸಬ್ಬತ್ತನ್ನು ಅವನು ಆಕ್ರಮಣ ಮಾಡುತ್ತಾನೆ.

ಕೊನೆಯ ದಿನಗಳಲ್ಲಿ ದೇವರಿಗೆ ವಿಧೇಯರಾಗಿ ಮತ್ತು ಸ್ಥಿರವಾಗಿ ನಿಲ್ಲುವ ಜನರನ್ನು ಆತನು ಸಿದ್ದ ಪಡಿಸುತ್ತಾನೆ. ಈ ವಿಧೆಯತೆಯು ಆತನ ಎಲ್ಲಾ ಆಜ್ಞೆಗ್ಗಳನ್ನು ಕೈಕೊಂಡು ನಡೆಯುವ ಅದರಲ್ಲಿ ಏಳನೇಯ ದಿನದ ಆಜ್ಞೆಯು ಕೂಡ ಸೇರಿದೆ ಯಾಕೆಂದರೆ ಈ ಆಜ್ಞೆಯು ಆತನನ್ನು ಸೃಷ್ಟಿ ಕರ್ತನು ಎಂದು ತೋರಿಸುತ್ತದೆ. ಮತ್ತು ಆತನು ಮಾತ್ರ ನಮ್ಮ ಆರಾಧನೆಗೆ ಯೋಗ್ಯನು ಎಂದು ತಿಳಿಸುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು:

1. ಪಾಪದ ವಾಸ್ತವತೆಯನ್ನು ಅಂಗಿಕರಿಸಿದರೂ ಕೂಡ ದೇವರ ಆಜ್ಞೆಯನ್ನು ಹೊಡೆದುಹಾಕಲಾಗಿದೆ ಎಂದು ವಾದಿಸುವವರ ಸಮಸ್ಯೆಯೇನು? ಈ ತರ್ಕದಲ್ಲಿ ಯಾವ ರೀತಿಯ ಅಸಮಾನತೆಯನ್ನು ನೀವು ತೋರಿಸುವಿರಿ?

2. ಸಬ್ಬತ್ತಿನ ಬದಲಿಗೆ ಭಾನುವಾರ ಆರಾಧನೆ ಮುಖ್ಯ ಎಂದು ವಾದಿಸುವವರ ಜೊತೆಯಲ್ಲಿ ನಿಮಗಿರುವ ಅನುಭವವೇನು?ಇವರಲ್ಲಿ ಕೆಲವರು ಎಷ್ಟು ಪ್ರಭಲವಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ? ಸಬ್ಬತ್ ದಿನವನ್ನು ಕಾಪಾಡುವುದು ಕ್ರಿಯೆಗಳಿಂದ ರಕ್ಷಣೆಯನ್ನು ಹೊಂದಿದ ಹಾಗೆ ಎಂದು ವಾದ ಮಾಡುವವರಿಗೆ ನೀವು ಕೊಡುವ ಉತ್ತರವೇನು?

3. ನಾವು ಇತರರ ಜೊತೆಯಲ್ಲಿ ಸಬ್ಬತ್ತಿನ ಕುರಿತಾಗಿ ಮಾತನಾಡುವುದು ಮತ್ತು ಕೊನೆಯ ದಿನಗಳ ಘಟನೆಗಳಿಗೆ ಸಿದ್ದರಾಗುವ ಹಾಗೆ ಮೃಗದ ಗುರುತನ್ನು ಇನ್ನೂ ಹಾಕಲಾಗಿಲ್ಲ ಎಂಬ ಸತ್ಯವನ್ನು ತಿಳಿಸುವುದು ಎಷ್ಟು ಪ್ರಾಮುಖ್ಯವಾದದ್ದು?